(ಊ) ಆಶ್ರಯ ಸಮಿತಿ ಸದಸ್ಯರುಗಳಿಗೆ ದಿನಪ್ರಯಾಣ ಭತ್ಯೆ ನೀಡುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ವತಿಯಿಂದ ಈ ಆಶ್ರಯ ಸಮಿತಿಗಳಿಗೆ ಸದಸ್ಯರನ್ನು ಏನು ನಾಮಕರಣ ಮಾಡಿದ್ದಾರೆ, ಮತ್ತೆ ವಾರಕ್ಕೆ ಎರಡು ಸಭೆಗಳನ್ನು ಕರೆಯಬೇಕು, ಇಷ್ಟು ಸಭೆಗಳನ್ನು ಕರೆಯಬೇಕೆಂದು ಬರೆದು ಕಳುಹಿಸುತ್ತಾರೆ, ಇವತ್ತಿನವರೆಗೆ ಒಬ್ಬರಿಗೂ ಟಿಎ, ಡಿಎ ಕೊಟ್ಟಿಲ್ಲ, ನಾವು ಸಭೆಗಳಿಗೆ ಕರೆದರೆ ಸದಸ್ಯರುಗಳು ರೆಗ್ಯುಲರ್ ಆಗಿ ಹಾಜರಾಗುವ ಪರಿಸ್ಥಿತಿ ಇಲ್ಲ ಅದಕ್ಕೆ ನಾವು ಅನೇಕ ಸಾರಿ ಕೇಳಿದ್ದೇವೆ, ಆ ಬಕರ್‌ಹುಕುಂ ಆಶ್ರಯ ಸಮಿತಿಯವರಿಗೆ, ಎಂಎಲ್‌ಎಗಳಿಗೆ ಕೊಡದಿದ್ದರೂ ಪರವಾಗಿಲ್ಲ, ನಾವು ಕೆಲಸ ಬಡವರನ್ನೆಲ್ಲಾ ಆ ಸಮಿತಿಯಲ್ಲಿ ಸದಸ್ಯರನ್ನಾಗಿ ಮಾಡಿಕೊಂಡಿರುತ್ತೇವೆ. ಇಂತಿಂಥ ಕ್ಯಾಟಗರಿ ಮಾಡಿ ಎಂದು ಒಂದು ಅವರು ನೀತಿ ಮಾಡಿಬಿಟ್ಟಿದ್ದಾರೆ. ಅವರಿಗೆ ಕನಿಷ್ಟವೇನಾದರೂ ಟಿಎ, ಡಿಎ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಯಾರ್ಯಾರು ಹಿಂದಿನಿಂದ ಕೆಲಸ ಮಾಡಿದ್ದಾರೆ ಅವರಿಗೆ ಅದನ್ನು ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— ಕಂದಾಯ ಸಚಿವರಿಂದ ಈ ಬಗ್ಗೆ ಒಂದು ದೀರ್ಘವಾದ ಹೇಳಿಕೆಯನ್ನು ಕೊಡಿಸುವುದರ ಜೊತೆಗೆ ತಕ್ಷಣ ಇದರ ಬಗ್ಗೆ ಒಂದು ಪರಿಹಾರವನ್ನು ಕೂಡ ಕಂಡುಹಿಡಿಯುತ್ತೇವೆ.

11.40 ಎ.ಎಂ.

(ಋ) ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ(ಬೀದರ್):— ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಬೀದರ್ ಜಿಲ್ಲೆಯ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರವಾಗಿದೆ ಎಂದು ಕಳೆದ 45 ದಿನಗಳಿಂದ ಅಲ್ಲಿನ ರೈತರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ನಡೆಸುತ್ತಿದ್ದಾರೆ. ಅಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನಮ್ಮ ಜಿಲ್ಲೆಯ ಇಬ್ಬರು ಪತ್ರಮಾಣಿಕ ರಾಜಕಾರಣಿಗಳಾದ ಕಾಶೀನಾಥ್‌ರಾವ್ ಬೇಲೂರ್‌ರವರು ಮತ್ತು ದಯಾನಂದರಾವ್ ಹಳ್ಳಿಕೇಡ್‌ರವರು ಸರ್ಕಾರಕ್ಕೆ ಹೇಳಿ ಹೇಳಿ ಸಾಕಾಗಿ ಕೊನೆಗೆ ಅವರು ರಿಸೈನ್ ಮಾಡಿದ್ದಾರೆ. ಅಲ್ಲಿ ರೈತರು ಧರಣಿ ನಡೆಸುತ್ತಿದ್ದಾರೆ. ಮತ್ತು 20ನೇ ತಾರೀಖು ನಡೆದಂಥ ಪ್ರೊಸೆಷನ್‌ನಲ್ಲಿ ಡಿ.ಜಿ. ಕಛೇರಿಯ ಮುಂದೆ ಒಬ್ಬ ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಅವರ ಹೆಸರು ಚಂದ್ರಪ್ಪ ಮಾಯಿತಿ. ನಮ್ಮ ಜಿಲ್ಲೆಯಲ್ಲಿರುವ ಪ್ರಾಮಾಣಿಕ ರಾಜಕಾರಣಿಗಳೆಂದರೆ ಅವರಿಬ್ಬರು. ಅವರ ಶಿಷ್ಯರು ನಾವು. ದಯಾನಂದರಾವ್ ಹಳ್ಳಿಕೇಡ್‌ರವರು ಟೆಂಪರೆನ್ಸ್ ಬೋರ್ಡ್‌ನ ಛೇರ್‌ಮನ್ ಮತ್ತು ಕಾಶೀನಾಥ್‌ರಾವ್ ಬೇಲೂರ್‌ರವರು ಹಿರಿಯ ಸಮಾಜವಾದಿಗಳು ಹಾಗೂ ಲೋಹಿಯಾವಾದಿಗಳು. ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರವನ್ನು ನಡೆಸುತ್ತಿದ್ದಾರೆ